**ಅಸಲು ದಾವಾ ನಂ:264/2020**
**ಪಿ.ಡಬ್ಲ್ಯು 01**

**ದಿನಾಂಕಃ 24.05.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಓ.ಹೆಚ್.ಜೆ. ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕ.13.06.2018 ರ ಮೂಲ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಅಂತ, ಗಣಕೀಕೃತ ಆರ್.ಟಿ.ಸಿ.ಯನ್ನು ನಿ.ಪಿ.2 ಅಂತ, ದಿನಾಂಕ.14.08.2020 ರ ಕಾನೂನು ಬದ್ದ ನೋಟೀಸ್ ನ ಕಚೇರಿ ಪ್ರತಿಯನ್ನು ನಿ.ಪಿ.3 ಅಂತ, ಹತ್ತು ಅಂಚೆ ರಸೀದಿಗಳನ್ನು ನಿ.ಪಿ.4 ರಿಂದ 13 ಅಂತ, ಐದು ಅಂಚೆ ಸ್ವೀಕೃತಿಗಳನ್ನು ನಿ.ಪಿ.14 ರಿಂದ 18 ಅಂತ, ಐದು ಅಂಚೆ ಲಕೋಟೆಗಳನ್ನು ನಿ.ಪಿ.19 ರಿಂದ 23 ಅಂತ, ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ತೆಗೆದು ಅವುಗಳಲ್ಲಿ ಇದ್ದ ಮೂಲ ನೋಟಿಸ್ ಗಳನ್ನು ಕ್ರಮವಾಗಿ ನಿಪಿಃ19 (ಎ) ರಿಂದ 23(ಎ) ಅಂತ ಗುರುತಿಸಲಾಯಿತು.

ಆದ್ದರಿಂದ ಸದರಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.